ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 26.09.2022.

**ಪಾಟೀ ಸವಾಲು – 2 ನೇ ಆರೋಪಿತ ಪರ ವಕೀಲರಿಂದ.**

1) ನಮ್ಮ ಅಂಗಡಿಯಲ್ಲಿ ಕಳುವು ಆದ ವಿಚಾರವನ್ನು ನನಗೆ ನನ್ನ ತಮ್ಮ ಚಾಸಾ-1 ರವರು ಬೆಳಗ್ಗೆ 07.30 ಕ್ಕೆ ತಿಳಿಸಿರುತ್ತಾರೆ. ಅಂಗಡಿಯ ವ್ಯವಹಾರವನ್ನು ನಾನು ಮತ್ತು ನನ್ನ ತಮ್ಮ ಚಾಸಾ-1 ರವರು ಇಬ್ಬರು ನೋಡಿಕೊಳ್ಳುತ್ತೇವೆ. ಅಂಗಡಿಯಲ್ಲಿ ಮಾರಾಟಕ್ಕಿಟ್ಟ ಮೊಬೈಲಗಳನ್ನು ನಾವು ಖರೀದಿ ಮಾಡಿದ ಬಗ್ಗೆ ಎಲ್ಲ ದಾಖಲೆಗಳನ್ನು ನಮ್ಮ ಬಳಿ ಇಟ್ಟುಕೊಂಡಿರುತ್ತೇವೆ. ಸದರಿ ದಾಖಲೆಗಳನ್ನು ತನಿಖಾ ಸಮಯದಲ್ಲಿ ನಾವು ಪೋಲೀಸರಿಗೆ ಹಾಜರುಪಡಿಸಿರುತ್ತೇವೆ. ಪೋಲೀಸರು ಆರೋಪಿತರಿಂದ ಜಪ್ತುಪಡಿಸಿದ ಮಾಲುಗಳನ್ನು ನಮಗೆ ಬಿಟ್ಟು ಕೊಟ್ಟ ಬಳಿಕ ನಾವು ಅದನ್ನು ಗ್ರಾಹಕರಿಗೆ ಮಾರಾಟ ಮಾಡಿರುತ್ತೇವೆ.

2) ಸದರಿ ಮೊಬೈಲಗಳನ್ನು ಮುಂದೆ ನ್ಯಾಯಾಲಯಕ್ಕೆ ವಿಚಾರಣಾ ಕಾಲದಲ್ಲಿ ಹಾಜರುಪಡಿಸಬೇಕು ಎಂಬುದು ನಮಗೆ ಪೋಲೀಸರು ತಿಳಿಸಿರುವುದಿಲ್ಲ. ಪೋಲೀಸರು ಎರಡು ಸಲ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಚಾಸಾ-1 ರವರ ಮಾತನ್ನು ಕೇಳಿಕೊಂಡು ಇಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – 1 ನೇ ಆರೋಪಿ ಪರ ವಕೀಲರಿಂದ.**

1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿಸಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.